# ಚಿಟ್ಟೆಯಾಗುವ ಪರಿ..

ಚಿತ್ರ– ಲೇಖನ:
**ಶಶಿಧರಸ್ವಾಮಿ ರು. ಹಿರೇಮಠ**



**ಮ**ನೆಯ ತೋಟದಲ್ಲಿ ಆಗ ತಾನೇ ಚಿಗುರುತ್ತಿದ್ದ ಅತ್ತಿ (ಔದುಂಬರ) ಮರದ ಚಿಗುರೆಲೆಯನ್ನು ಕಂಬಳಿಹುಳ ತಿನ್ನುತ್ತಿದ್ದ ದೃಶ್ಯ ಕಣ್ಣಿಗೆ ಬಿತ್ತು. ತಕ್ಷಣ ಆ ಕ್ಷಣವನ್ನು ನನ್ನ ಕ್ಯಾಮರಾದಲ್ಲಿ ಸೆರೆ ಹಿಡಿದೆ. ದಿನವು ಕಂಬಳಿಹುಳಿವಿನ ಚಲನ–ವಲನವನ್ನು ವಿಕ್ಷಿಸುತ್ತ ಅದನ್ನು ಕ್ಯಾಮೆರಾದೊಳಕ್ಕೆ ದಾಖಲಿಸಿದೆ.

ತನ್ನ ಹರಿತವಾದ ಹಲ್ಲುಗಳಿಂದ ಚಿಗುರೆಲೆಗಳನ್ನು ಮೇಯುತ್ತಾ ದಿನದಿಂದ ದಿನಕ್ಕೆ ಅದು ದೈತ್ತಾಕಾರದಲ್ಲಿ ಬೆಳವಣಿಗೆ ಹೊಂದತೊಡಗಿತು. 8ನೇ ದಿನ ಕಂಬಳಿಹುಳವನ್ನು ಹತ್ತಿರದಿಂದ ಗಮನಿಸಿದಾಗ ಅದರ ಚಟುವಟಿಕೆ ಮಂದವಾಗಿರುವುದು ಗೋಚರಿಸಿತು. ಹಾಗೇ ವಿಕ್ಷಿಸುತ್ತಾ ಅಲ್ಲೇ ನಿಂತೆ. ನಿಧಾನವಾಗಿ ತೆವಳುತ್ತಾ ಒಂದು ಎಲೆಯ ಕೆಳ ಬಂದ ಕಂಬಳಿಹುಳು ತನ್ನ

(8ನೇ ಪುಟ ನೋಡಿ)







